ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ತಿನ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 23/3/21

## ವಿಜಯ ಕರ್ನಾಟಕ ಪ್ರಕಟಿಸಿದ ಸರಣಿ ವರದಿ ವಿಧಾನ ಪರಿಷತ್‌ನಲ್ಲಿ ಪ್ರಸ್ತಾಪ

# ಫಾಸ್ಟ್ಯಾಗ್, ಅವೈಜ್ಞಾನಿಕ ಟೋಲ್‌ನಿಂದ ಜನರಿಗೆ ಕಿರಿಕಿರಿ

**ಬೆಂಗಳೂರು:** ಹೆದ್ದಾರಿಗಳಲ್ಲಿ ಫಾಸ್ಟ್ಯಾಗ್ ಮತ್ತು ಅವೈಜ್ಞಾನಿಕ ಟೋಲ್ ಶುಲ್ಕದಿಂದ ಸಾರ್ವಜನಿಕರು ಕಿರಿಕಿರಿ ಅನುಭವಿಸುವಂತಾಗಿದೆ. ಈ ತೊಂದರೆ ನಿವಾರಣೆ ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿಯ ಮಹಾಂತೇಶ್ ಕವಟಗಿಮಠ ಸರಕಾರವನ್ನು ಒತ್ತಾಯಿಸಿದರು.

'ವಿಜಯ ಕರ್ನಾಟಕ' 'ಟೋಲ್ ಗೋಳ್' ಶೀರ್ಷಿಕೆಯಡಿ ಪ್ರಕಟಿಸಿದ ಸರಣಿ ವರದಿಗಳ ಬಗ್ಗೆ ಪ್ರಶ್ನೋತ್ತರ ಅವಧಿಯಲ್ಲಿ ಪ್ರಸ್ತಾಪಿಸಿದ ಅವರು, ''ಫಾಸ್ಟ್ಯಾಗ್‌ನಿಂದ ವಾಹನ ಸವಾರರು ಅನುಭವಿಸುತ್ತಿರುವ ತೊಂದರೆ, ಕಿರಿಕಿರಿ ಬಗ್ಗೆ ಪತ್ರಿಕೆಯಲ್ಲಿ ವಿಸ್ತೃತ ವರದಿ ಪ್ರಕಟಿಸಿದ್ದಾರೆ,'' ಎಂದರು.

''ಬೆಳಗಾವಿಯಲ್ಲಿ 25ಕ್ಕೂ ಅಧಿಕ ಸಕ್ಕರೆ ಕಾರ್ಖಾನೆಗಳಿದ್ದು, ಕಬ್ಬು ತುಂಬಿದ ಟ್ರ್ಯಾಕ್ಟರ್‌ಗಳು




ಟೋಲ್‌ಗಳಲ್ಲಿ ಸಾಲುಗಟ್ಟಿ ನಿಲ್ಲುವಂತಾಗಿದೆ. ಹಾಗಾಗಿ, ಟೋಲ್‌ಗಳ ಬಳಿ ರಸ್ತೆಗಳನ್ನು ವಿಸ್ತರಿಸಿ, ವಾಹನಗಳ ಸರಾಗ ಸಂಚಾರಕ್ಕೆ ಅನುವು ಮಾಡಿಕೊಡಬೇಕು,'' ಎಂದರು.

ಇದಕ್ಕೆ ಉತ್ತರಿಸಿದ ಡಿಸಿಎಂ ಗೋವಿಂದ ಎಂ. ಕಾರಜೋಳ, ''ಖಾಸಗಿ ಕಂಪನಿಗಳು ಸಾಲ ಪಡೆದು ರಸ್ತೆಗಳನ್ನು ನಿರ್ಮಿಸಿವೆ. ಆ ಸಾಲ ಮರುಪಾವತಿಯಾಗುವವರೆಗೆ ಟೋಲ್ ಶುಲ್ಕ ವಸೂಲು ಮಾಡಲು ಅನುಮತಿ ಇದೆ. ರಾಜ್ಯ ಹೆದ್ದಾರಿಗಳಲ್ಲೂ ಫಾಸ್ಟ್ಯಾಗ್ ಅಳವಡಿಸುವ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ,'' ಎಂದರು.

''ಕಬ್ಬು ತುಂಬಿದ ವಾಹನಗಳ ಸಂಚಾರಕ್ಕೆ ಬೈಪಾಸ್ ರಸ್ತೆಗಳನ್ನು ನಿರ್ಮಿಸುವ ಬಗ್ಗೆ ಚಿಂತಿಸಲಾಗುವುದು. ಅಲ್ಲದೇ ಟೋಲ್ ವ್ಯಾಪ್ತಿಯ ಪ್ರದೇಶಗಳಲ್ಲಿನ ರೈತರ ವಾಹನಗಳಿಗೆ ಟೋಲ್ ಶುಲ್ಕದಲ್ಲಿ ರಿಯಾಯಿತಿ ನೀಡಲು ಕ್ರಮ ವಹಿಸಲಾಗುವುದು,'' ಎಂದು ಭರವಸೆ ನೀಡಿದರು.